

‘ಮಹಿಳೆಯರು ಅಡುಗೆಮನೆಗೆ ಲಾಯಕ್ಕು’, ‘ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ತಾಯಂದಿರು ಸ್ವಲ್ಪ ದಾರಿ ತಪ್ಪುತ್ತಿದ್ದಾರೆ’ – ಈ ಮಾತುಗಳನ್ನು ಯಾರು ಆಡಿದರು ಎನ್ನುವುದು ಮುಖ್ಯವಲ್ಲ. ಇಂಥ ಮಾತುಗಳು, ಸಮಾಜದ ಒಂದು ವರ್ಗದ ಮನಸ್ಸಿನ ಭಾವನೆಯ ಅಭಿವ್ಯಕ್ತಿಯಾಗಿರುತ್ತವೆ. ಹೆಣ್ಣಿನ ಪಾಲಿನ ಬಿಡುಗಡೆಯ ದಾರಿಗಳು ಗಂಡಿನ ಕಣ್ಣಿಗೆ ದಾರಿ ತಪ್ಪುವ ಸಾಧ್ಯತೆಗಳಾಗಿ ಕಂಡಿರುವುದಕ್ಕೆ ಚರಿತ್ರೆ–ಪುರಾಣಗಳಲ್ಲಿ ಸಾಕಷ್ಟು ಉದಾಹರಣೆಗಳಿವೆ. ಲಿಂಗಭೇದದ ಮನೋಧರ್ಮ ಈಗಲೂ ಬದಲಾಗಿಲ್ಲ. ಗಂಡಿನ ನಿರೀಕ್ಷೆಯ ಚೌಕಟ್ಟಿಗೆ ಹೊಂದದ ಹೆಣ್ಣಿನ ನಡವಳಿಕೆಗಳು ಸಮಾಜದ ಕಣ್ಣಿಗೆ ಲೋಪಗಳಾಗಿ ಕಾಣಿಸುತ್ತವೆ. ಲಿಂಗಸಂವೇದನೆಯನ್ನು ಸಮಾಜ ರೂಪಿಸಿಕೊಳ್ಳಲು ಇನ್ನೆಷ್ಟು ಸಮಯ ಬೇಕು? ಗಂಡು ತನ್ನ ಪೂರ್ವಗ್ರಹಗಳ ಕೋಶದಿಂದ ಹೊರಬರುವುದು ಯಾವಾಗ?

■ **ಕೋಡಿಬೆಟ್ಟು ರಾಜಲಕ್ಷ್ಮಿ**